ಸಹ ತಮ್ಮ ಕಡೆಯಿಂದ ಕೂಪನ್ ಬಂದಿರುವುದು ಕೇವಲ 18ಸಾವಿರ. ಸೀಮೆಎಣ್ಣೆಯನ್ನು ಕೊಡುವಂತಹ ಕೂಪನ್‌ನಲ್ಲಿ ವಿತರಣೆಯಲ್ಲಿ ಸಹ ತಾರತಮ್ಯವಾಗುತ್ತಿದೆ. ಅದರಿಂದ ಸಮಸ್ಯೆಗಳು ಉದ್ಭವವಾಗುವುದು ನಿಜ. ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಬಿ.ಇನಾಂದಾರ್: ಕೇಂದ್ರಸರ್ಕಾರದಿಂದ ಎಲ್‌ಪಿಜಿ ಗ್ಯಾಸ್ ಇದ್ದವರಿಗೆ ಅದರಲ್ಲೂ ಎರಡು ಸಿಲಿಂಡರ್ ಇದ್ದವರಿಗೆ ಸೀಮೆಎಣ್ಣೆ ಕೊಡಬಾರದೆಂದು ಆಜ್ಞೆ ಬಂದ ಕಾರಣ, ಅದರ ಜೊತೆಗೆ ನಮಗೆ ಕೊಡತಕ್ಕ ಕೋಟಾ ಕೂಡ ಕಡಿಮೆ ಮಾಡಿದ್ದಾರೆ. ಒಂದು ಸಿಲಿಂಡರ್ ಇದ್ದವರಿಗೆ ಕೇವಲ ಎರಡುಲೀಟರ್ ಸೀಮೆಎಣ್ಣೆ ಕೊಡುವ ಪದ್ಧತಿ ಇರುವುದರಿಂದ ಕೂಪನ್ ಕೊಡುವಾಗ ಎಷ್ಟು ಕನೆಕ್ಷನ್‌ಗಳಿವೆ ಅವುಗಳನ್ನು ಕಡಿಮೆ ಮಾಡಿ ಕೂಪನ್‌ಗಳನ್ನು ಕೊಡುತ್ತಿದ್ದೇವೆ.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಆಹಾರ ಸಚಿವರು ಉತ್ತಮವಾದ ಉತ್ತರವನ್ನು ಕೊಟ್ಟಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಜಿಲ್ಲಾಮಟ್ಟದಲ್ಲಿ ಫುಡ್ ಡಿಸ್ಟ್ರಿಬ್ಯೂಷನ್‌ನಲ್ಲಿ ಸುಮಾರು ಲಕ್ಷಾಂತರ ಟನ್ ಅಕ್ಕಿ ಅವ್ಯವಹಾರವಾಗಿದೆ.

ಅಧ್ಯಕ್ಷರು: ತಾವು ಬೇರೆ ಪ್ರಶ್ನೆ ಕೇಳಿ. ಈಗ ತುಮಕೂರು ಜಿಲ್ಲೆಯ ಉತ್ತರ ಅವರ ಹತ್ತಿರ ಎಲ್ಲಿದೆ?

ಶ್ರೀ ಸಿ.ಚನ್ನಿಗಪ್ಪ: ನಾನು ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಲಕ್ಷಾಂತರ ಟನ್ ಅಕ್ಕಿ ಅವ್ಯವಹಾರವಾಗಿದೆ. ಅದರ ಬಗ್ಗೆ ಎನ್‌ಕ್ವೈರಿ ಮಾಡಿದ್ದಾರೆ. ತಾವು ಹೇಳಿದ ಹಾಗೆ ಸಪರೇಟ್ ಪ್ರಶ್ನೆ ಕೇಳುತ್ತೇನೆ. ನಮ್ಮಲ್ಲಿ ಶಾಲಾ ಮಕ್ಕಳಿಗೆ ಕೊಡುವಂತಹ ಅಕ್ಕಿ ಕಳಪೆಮಟ್ಟದ್ದಾಗಿದೆ, ಅದನ್ನು ಸರಿಯಾದ ಸಮಯಕ್ಕೆ ಸಪ್ಲೈ ಮಾಡುತ್ತಿಲ್ಲವೆಂದು ನಮ್ಮ ತಾಲ್ಲೂಕಿನಲ್ಲಿ ಅನೇಕ ಜನ ದೂರಿದ್ದಾರೆ. ಅದನ್ನು ಪರಿಶೀಲನೆ ಮಾಡಬೇಕು, ಕ್ರಮವಾಗಿ ಅಕ್ಕಿಯನ್ನು ವಿತರಣೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಬೆಂಗಳೂರು ಮಹಾನಗರ ಪಾಲಿಕೆಗೆ ಸ್ವಯಂ ಆಸ್ತಿ ತೆರಿಗೆಯಿಂದ ಬಂದ ವರಮಾನ.

188(1980)

ಶ್ರೀ ರಾಮಲಿಂಗಾರೆಡ್ಡಿ(ಜಯನಗರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ

ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-02ನೇ ಸಾಲಿನಲ್ಲಿ ಇದುವರೆಗೆ ಬೆಂಗಳೂರು ನಗರದಲ್ಲಿ ಸ್ವಯಂ ಆಸ್ತಿ ತೆರಿಗೆ ಪದ್ಧತಿಯಲ್ಲಿ ಬಂದ ವರಮಾನವೆಷ್ಟು?

ಆ) ಕಳೆದ ಸಾಲಿನಲ್ಲಿ ಸ್ವಯಂ ಆಸ್ತಿ ತೆರಿಗೆಯಿಂದ ಬಂದ ಹಣವೆಷ್ಟು?

ಇ) 2001-02ನೇ ಸಾಲಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮನೆ ಮಾಲೀಕರು ಕಂದಾಯ ಕಟ್ಟದೇ ಇರುವುದರಿಂದ ಹಣ ಕಟ್ಟುವ ಅವಧಿಯನ್ನು ಮತ್ತೆ ಎರಡು ತಿಂಗಳು ವಿಸ್ತರಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ರೂ.75.00 ಕೋಟಿಗಳು

ಆ) ರೂ.157.00 ಕೋಟಿಗಳು

ಇ) 2001-02ನೇ ಆರ್ಥಿಕ ವರ್ಷವು 1-4-2001ರಿಂದ ಪ್ರಾರಂಭವಾಗಿದ್ದು, ಹಲವಾರು ಮಂದಿ ಕಟ್ಟಡ ಮಾಲೀಕರು ಮೊದಲನೇ ಅರ್ಧ ವಾರ್ಷಿಕ ಆಸ್ತಿ ತೆರಿಗೆ ಪಾವತಿ ಮಾಡಿರುತ್ತಾರೆ. ಉಳಿದ ಅರ್ಧ ವಾರ್ಷಿಕ ತೆರಿಗೆಯನ್ನು ಅಕ್ಟೋಬರ್ 1 ರಿಂದ ನವೆಂಬರ್ 30ರವರೆಗೆ ಪಾವತಿ ಮಾಡಲು ಅವಕಾಶವಿದೆ. ಬಾಕಿ ಉಳಿಸಿಕೊಂಡಿರುವುದರಿಂದ ಆಸ್ತಿ ತೆರಿಗೆ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯು ಐಚ್ಛಿಕವಾಗಿದ್ದು, ಅಗತ್ಯವಾದಲ್ಲಿ ಮತ್ತೆ ಅಕ್ಟೋಬರ್ 2001ರಲ್ಲಿ ಪುನಃ ಸ್ವಲ್ಪ ಕಾಲದವರೆಗೆ ಜಾರಿಗೆ ತರಬಹುದಾಗಿದೆ.

ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಈಗಾಗಲೇ ಅಳವಡಿಸಿಕೊಂಡಿರುವವರು ಮತ್ತು ಸಾರ್ವತ್ರಿಕ ಕಂದಾಯ ಪರಿಷ್ಕರಣೆಗೆ ಒಳಪಟ್ಟಿರುವವರು ಬಾಕಿ ಇರುವ ಕಂದಾಯವನ್ನು ಪಾವತಿ ಮಾಡಲು ಮುಕ್ತ ಅವಕಾಶವಿದೆ. ಆದರೆ, ಬಾಕಿ ಇರುವ ಕಂದಾಯದ ಮೇಲೆ ವರ್ಷಕ್ಕೆ ಶೇ.5ರಷ್ಟು ದಂಡ ಸಮೇತ ವಸೂಲಿ ಮಾಡಬೇಕಾಗುತ್ತದೆ.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಇದು ಮೇ ಅಂತ್ಯಕ್ಕೆ ಮುಗಿಯಿತು. ನಾನು ಇನ್ನು ಎರಡು ತಿಂಗಳು extend ಮಾಡಿಯೆಂದು ಕೇಳಿದ ಉದ್ದೇಶವೇನೆಂದರೆ, ಮೇ ಮತ್ತು ಜೂನ್ ತಿಂಗಳಿನಲ್ಲಿ ಮಕ್ಕಳು

ಶಾಲಾಕಾಲೇಜುಗಳಿಗೆ ಸೇರುತ್ತಾರೆ. ಜನರ ಹತ್ತಿರ ಹಣ ಇರುವುದಿಲ್ಲ. ಅದಕ್ಕಾಗಿ ಎರಡು ತಿಂಗಳು ಎಕ್ಸ್‌ಟೆನ್ಷನ್ ಕೊಡಿಯೆಂದು ಕೇಳಿದ್ದು ಮಾನ್ಯ ಮುಖ್ಯಮಂತ್ರಿಗಳು ಅಗತ್ಯವಿದ್ದರೆ ಅಕ್ಟೋಬರ್ ಮತ್ತು ನವೆಂಬರ್ ತಿಂಗಳನಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಎರಡು ತಿಂಗಳು ಎಕ್ಸ್‌ಟೆನ್ಷನ್ ಕೊಟ್ಟರೆ ಒಳ್ಳೆಯದೆಂದು ನನ್ನ ಅನಿಸಿಕೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ತೆರಿಗೆ ಕಟ್ಟಲಿಕ್ಕೆ ವರ್ಷದಲ್ಲಿ ಎರಡು ಸಾರಿ ನಾಗರೀಕರಿಗೆ ಅವಕಾಶ ಸಿಗುತ್ತದೆ. ಮಾನ್ಯ ಸದಸ್ಯರೇನು ಸಲಹೆ ಕೊಟ್ಟಿದ್ದಾರೆ, ಆ ಸಲಹೆಯನ್ನು ಮಹಾನಗರ ಪಾಲಿಕೆಗೆ ಕಳುಹಿಸಿ ಕೊಡುತ್ತೇನೆ.

ಪ್ರಶ್ನೆ ಸಂಖ್ಯೆ-2457

ಶ್ರೀ ಮನೋಹರ್ ಪುನ್ನಪ್ಪ ಕಾಡೊಳ್ಳರ್: ಸನ್ಮಾನ್ಯ ಮಿನಿಸ್ಟರ್ ಸಾಬ್ ಮೇರೆ ಕ್ವೊಶ್ಚನ್ ಕೆ ಉತ್ತರ ನಹೀ ದಿಯಾ. ಮಿನಿಸ್ಟರ್ ಸಾಬ್ ಕೊ ರಿಕ್ವೆಸ್ಟ್ ಕರ್‌ತಾ ಹೂ; ಸಪ್ಲಿಮೆಂಟರಿ ಟೈಮ್ ಮೆ ಮುಝೆ ಉತ್ತರ್ ದೇವೊ.

ಶ್ರೀ ಬಿ.ಎಸ್.ಗುರುಸ್ವಾಮಿ: ಮಾನ್ಯ ಸದಸ್ಯರ ಹಿಂದಿ ಭಾಷಣ ಮಂತ್ರಿಗಳಿಗೆ ಅರ್ಥವಾಗತ್ತದೋ ಇವರ ಕನ್ನಡ ಅವರಿಗೆ ಅರ್ಥವಾಗುತ್ತದೋ ಗೊತ್ತಿಲ್ಲ.

ಅಧ್ಯಕ್ಷರು: ಅವರವರು ಮಾತನಾಡಲಿ ನೀವು ಸುಮ್ಮನಿರಿ.

ಶ್ರೀ ಎಸ್.ಕುಮಾರ್‌ಬಂಗಾರಪ್ಪ: ನಾನು ಮಾನ್ಯ ಸದಸ್ಯರ ಜೊತೆಯಲ್ಲಿ ಮಾತನಾಡಿ ಉತ್ತರ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖಿಗೇ: ಈ ಪ್ರಶ್ನೆ ಭಾರೀ ನೀರಾವರಿ ಇಲಾಖೆಯಿಂದ ಸಣ್ಣ ನೀರಾವರಿ ಇಲಾಖೆಗೆ ವರ್ಗಾವಣೆಯಾಗಿದೆ. ಅದಕ್ಕೆ ಉತ್ತರ ತರಿಸಿಕೊಂಡು ಹೇಳುತ್ತೇನೆಂದು ಸಣ್ಣ ನೀರಾವರಿ ಮಂತ್ರಿಗಳು ಹೇಳಿದರು.

ಅಧ್ಯಕ್ಷರು: ಹಾಗಾದರೆ ಈ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಕುಮಾರ್‌ಬಂಗಾರಪ್ಪ: ತಾವು ಅವಕಾಶ ಕೊಟ್ಟರೆ ನಾನು ಹಿಂದಿಯಲ್ಲಿ ಒಂದೆರಡು ಮಾತು ಬೇಕಾದರೆ ಹೇಳುತ್ತೇನೆ.

ಅಧ್ಯಕ್ಷರು: ಬೇಡ. ಮಾನ್ಯ ಮಂತ್ರಿಗಳು ಸದಸ್ಯರನ್ನು ತಮ್ಮ ಕಛೇರಿಗೆ ಕರೆಸಿ ಸಾರ್ಟ್‌ಔಟ್ ಮಾಡಿಕೊಳ್ಳಿ.

SRI S.KUMARBANGARAPPA: I have already given